ಕಾಲಕಾಲಕ್ಕೆ ಭರ್ತಿ ಮಾಡಲಾಗುತ್ತಿದೆ. ಆದಾಗ್ಯೂ ನೇಮಕಾತಿ ಆದೇಶ ನೀಡಿದ ಕೆಲವು ವೈದ್ಯರು ಕಾರ್ಯವರದಿ ಮಾಡಿಕೊಳ್ಳಲು ಮುಂದೆ ಬರುತ್ತಿಲ್ಲವಾದ್ದರಿಂದ ಎಲ್ಲಾ ಖಾಲಿ ಹುದ್ದೆಗಳನ್ನು ಭರ್ತಿ ಮಾಡಲು ಸಾಧ್ಯವಾಗಿಲ್ಲ.

6. ಪ್ರಸ್ತುತ 735 ಕಿರಿಯ ಮಹಿಳಾ ಆರೋಗ್ಯ ಸಹಾಯಕಿಯರ ಹಾಗೂ 314 ಕಿರಿಯ ಆರೋಗ್ಯ ಪುರಷ ಸಹಾಯಕರ ಹುದ್ದೆಗಳನ್ನು ವಿಶೇಷ ನೇಮಕಾತಿ ಸಮಿತಿ ಮೂಲಕ ಭರ್ತಿ ಮಾಡಲು ಮೇ 2011 ರಂದು ಅರ್ಜಿಗಳನ್ನು ಆಹ್ವಾನಿಸಿದ್ದು, ಆಯ್ಕೆ ಪ್ರಕ್ರಿಯೆಯು ಜಾರಿಯಲ್ಲಿದೆ.

7. ಇಲಾಖೆಯಲ್ಲಿ ಒಟ್ಟು 13965 ಗ್ರೂಪ್–ಡಿ ನೌಕರರ ಹುದ್ದೆಗಳು ಮಂಜೂರಾಗಿದ್ದು, ಆ ಪೈಕಿ 4067 ಹುದ್ದೆಗಳು ಖಾಲಿಯಿವೆ. ಸದರಿ ಖಾಲಿ ಹುದ್ದೆಗಳ ಪೈಕಿ 2323 ಹುದ್ದೆಗಳನ್ನು ನೇರ ನೇಮಕಾತಿ ಮೂಲಕ ಭರ್ತಿ ಮಾಡಲು ಸರ್ಕಾರವು ಇತ್ತೀಚೆಗೆ ಮಂಜೂರಾತಿ ನೀಡಿದೆ.

8. ಪ್ರಸ್ತುತ 224 ಪ್ರಥಮ ದರ್ಜೆ ಸಹಾಯಕರ ಹುದ್ದೆಗಳನ್ನು ನೇರ ನೇಮಕಾತಿ ಮೂಲಕ ತುಂಬುವ ಪ್ರಕ್ರಿಯೆಯು ಕರ್ನಾಟಕ ಲೋಕಸೇವಾ ಆಯೋಗದಲ್ಲಿ ಜಾರಿಯಲ್ಲಿದೆ.

ಆಸ್ಪತ್ರೆಗೆ ಔಷಧಿ ಖರೀದಿಗಾಗಿ ಹೆಚ್ಚು ಹಣ ಒದಗಿಸುವುದು

478 (874) ಶ್ರೀ ದಿನಕರ ಕೇಶವ ಶೆಟ್ಟಿ (ಕುಮಟ):–ಮಾನ್ಯ ಮುಖ್ಯಮಂತ್ರಿಗಳು ದಯೆಯಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ:–

ಅ) ಕುಮಟಾದ 50 ಹಾಸಿಗೆಯುಳ್ಳ ಸರ್ಕಾರಿ ಆಸ್ಪತ್ರೆಗೆ ಔಷಧಿಗಾಗಿ ಪ್ರತಿ ವರ್ಷ ನೀಡುತ್ತಿರುವ ಹಣವನ್ನು 10 ಲಕ್ಷಗಳಿಗೆ ಏರಿಸಲು ಕ್ರಮಕೈಗೊಳ್ಳುವುದೆ;

ಆ) ಹಾಗಿಲ್ಲದಿದ್ದಲ್ಲಿ, ಕಾರಣಗಳೆನು (ಮಾಹಿತಿ ನೀಡುವುದು)?

ಶ್ರೀ ಡಿ. ವಿ. ಸದಾನಂದಗೌಡ (ಮುಖ್ಯಮಂತ್ರಿಗಳು):–

ಅ) ಸಾರ್ವಜನಿಕ ಆಸ್ಪತ್ರೆ, ಕುಮಟಾ ಇಲ್ಲಿಗೆ ಒಳ ಹಾಗೂ ಹೊರ ರೋಗಿಗಳ ಆಧಾರದ ಮೇಲೆ 2010–11ನೇ ಸಾಲಿನಿಂದ ಔಷಧ ಮತ್ತು ರಾಸಾಯನಿಕಗಳಿಗಾಗಿ ರೂ.

20 ಲಕ್ಷ ಅನುದಾನವನ್ನು ನಿಗದಿಗೊಳಿಸಲಾಗಿದೆ.

ಆ) ಉದ್ಭವಿಸುವುದಿಲ್ಲ

ವಾರ್ಸಾ ಮತ್ತು ಪೋಡಿ ಉಚಿತವಾಗಿ ಮಾಡುವುದು

479 (875) ಶ್ರೀ ದಿನಕರ ಕೇಶವ ಶೆಟ್ಟಿ (ಕುಮಟ):–ಮಾನ್ಯ ಮುಖ್ಯಮಂತ್ರಿಗಳು ದಯೆಯಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ:–

ಅ) ಕಂದಾಯ ಇಲಾಖೆಯಲ್ಲಿ ವಾರ್ಸಾ ಮತ್ತು ಪೋಡಿಗಾಗಿ ರೂ. 600/– ಗಳನ್ನು ಪಡೆಯುತ್ತಿರುವುದರಿಂದ ರೈತರಿಗೆ ತೊಂದರೆಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಹಾಗಿದ್ದಲ್ಲಿ, ಹಿಂದಿನಂತೆ ಉಚಿತವಾಗಿ ವಾರ್ಸಾ ಮತ್ತು ಪೋಡಿಯನ್ನು ನೀಡಲು ಸರ್ಕಾರ ಕ್ರಮ ಕೈಗೊಳ್ಳುವುದೇ?

ಶ್ರೀ ಡಿ. ವಿ. ಸದಾನಂದಗೌಡ (ಮುಖ್ಯಮಂತ್ರಿಗಳು):–

ಅ) ವಾರ್ಸಾ ಪ್ರಕರಣಗಳಿಗೆ ಸಂಬಂಧಿಸಿದಂತೆ ನಕ್ಷೆಯಿಂದ ವಿನಾಯಿತಿ ನೀಡಿರುವುದರಿಂದ ಈ ಬಗ್ಗೆ ಶುಲ್ಕವನ್ನು ಸಂದಾಯ ಮಾಡಿಸಿಕೊಳ್ಳುತ್ತಿರುವುದಿಲ್ಲ ನೋಂದಣಿ ಪೂರ್ವ ನಕ್ಷೆಗಳಿಗೆ ಸಂಬಂಧಿಸಿದಂತೆ ರೂ. 600–00 ಗಳನ್ನು ಸಂದಾಯ ಮಾಡಿಸಿಕೊಂಡು ನಕ್ಷೆಯನ್ನು ವಿತರಿಸಲಾಗುತ್ತಿದೆ. ನೋಂದಣಿ ಪ್ರಕ್ರಿಯೆ ಪೂರ್ಣಗೊಂಡ ನಂತರ ಸಂಯೋಜಿತ ಮ್ಯುಟೇಷನ್ ಪೋಡಿಯಲ್ಲಿ ವಿತರಿಸಲಾದ ನಕ್ಷೆಗೆ ಸಂಬಂಧಿಸಿದಂತೆ ಪೋಡಿ ಕೆಲಸವನ್ನು ಪೂರ್ಣಗೊಳಿಸುತ್ತಿರುವುದರಿಂದ ರೈತರಿಗೆ ಯಾವುದೇ ರೀತಿಯಲ್ಲಿ ತೊಂದರೆಯಾಗುತ್ತಿರುವುದು ಕಂಡುಬರುತ್ತಿಲ್ಲ.

ಆ) ಸಾರ್ವಜನಿಕರು/ಭೂಹಿಡುವಳಿದಾರರುಗಳು ತಮ್ಮ ಜಮೀನಿನ ಅಳತೆ ಕಾರ್ಯವನ್ನು ಆದ್ಯತೆ ಮೇರೆಗೆ ಜೇಷ್ಠತೆ ಮೀರಿ ಮಾಡಿಸಿಕೊಳ್ಳಲು ಇಚ್ಛಿಸಿದಲ್ಲಿ ಶುಲ್ಕ ಪಾವತಿಸಿಕೊಂಡು ಮಾಡಿಸಿಕೊಳ್ಳಲು ಸರ್ಕಾರವು ತತ್ಕಾಲ್, ಮ್ಯುಟೇಶನ್ ಪೂರ್ವ ನಕ್ಷೆ ಯೋಜನೆಗಳನ್ನು ಜಾರಿಗೆ ತಂದಿರುತ್ತದೆ.

ಈ ಯೋಜನೆಯ ಪ್ರಯೋಜನ ಪಡೆಯಲು ಆಸಕ್ತರು, ನಿಗದಿತ ಶುಲ್ಕ